ಅಂಗವಾಗಬೇಕು. ಹೊಸ ಜನಾಂಗದ ಈ ಹವ್ಯಾಸದ ಆನಂದ ದಿಂದ ವಂಚಿತರಾಗುತ್ತಿದ್ದಾರೆ ಎಂಬುದೇ ವಿಷಾದಕರವಾದ ಸಂಗತಿ.

### ಭಾರತೀಯ ದೃಷ್ಟಿ

ಜೀವನದ ಪ್ರತಿಯೊಂದು ಚಟುವಟಿಕೆಗೂ ಆಧ್ಯಾತ್ಮಿಕ, ಧಾರ್ಮಿಕ ಸ್ಪರ್ಶವನ್ನು ನೀಡುವುದು ನಮ್ಮ ಸಂಸ್ಕೃತಿಯ ಜಾಯ ಮಾನ. ಓದು-ಬರಹದ ವಿಷಯದಲ್ಲಂತೂ ಇದು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ವಿದ್ಯಾಧಿದೇವತೆ ಸರಸ್ವತಿಯು 'ಪುಸ್ತಕಪಾಣಿ'ಯಾಗಿದ್ದಾಳೆ. ಸರಸ್ವತಿಯನ್ನು ಪೂಜಿಸುವ ದಿನ ಪುಸ್ತಕಗಳನ್ನು ಪೂಜಿಸಲಾಗುತ್ತದೆ. ಅಂದು ಶ್ರದ್ಧಾಭಕ್ತಿಯಿಂದ ಓದು-ಬರಹಗಳಲ್ಲಿ ಎಲ್ಲರೂ ತೊಡಗುತ್ತಾರೆ. ಇನ್ನು ಮಾನವನ ಜೀವನದಲ್ಲಿ ವಿದ್ಯಾಭ್ಯಾಸ ಆರಂಭವಾಗುವುದೇ 'ವಿದ್ಯಾರಂಭ' ದೊಂದಿಗೆ; ಸರಸ್ವತಿಯ ಆರಾಧನೆಯೊಂದಿಗೆ ಅಕ್ಷರಾಭ್ಯಾಸ ವನ್ನು ಮಕ್ಕಳಿಗೆ ಮಾಡಿಸುವಾಗ ವಿದ್ಯೆಯನ್ನು ಆರಾಧಿಸುವುದು ಸಂಪ್ರದಾಯ.

'ಒಂದಕ್ಷರ ಕಲಿಸಿದವನೂ ಗುರು' ಎಂಬ ಮಾತು ಪ್ರಚ ಲಿತವಾಗಿದೆ. ಅಕ್ಷರಕ್ಕೆ ನಮ್ಮ ಪರಂಪರೆ ಕೊಟ್ಟಿರುವ ಮಹತ್ವ ವಿದು. ಆದರೆ ನಮ್ಮ ದೇಶದಲ್ಲಿ ವಿದ್ಯಾಭ್ಯಾಸ, ಅಕ್ಷರಾಭ್ಯಾಸ ಇವು ಸಮಾಜದ ಎಲ್ಲ ವರ್ಗಗಳಿಗೂ ತಲುಪಿರಲಿಲ್ಲ ಎಂಬುದೇ ದೊಡ್ಡ ಕೊರತೆಯಾಗಿತ್ತು. ಆದರೆ ಸಾರ್ವಜನಿಕ ಶಿಕ್ಷಣದ ಮೂಲಕ ಈಗ ಈ ಕೊರತೆಯನ್ನು ನೀಗಲಾಗಿದೆ.

'ಶಬ್ದಬ್ರಹ್ಮ', 'ಅಕ್ಷರಬ್ರಹ್ಮ', 'ನಾದಬ್ರಹ್ಮ'-ಎಂಬೀ ಪರ ಬ್ರಹ್ಮನ ವಿಶೇಷಣಗಳು ಓಂಕಾರವನ್ನು ಸೂಚಿಸುತ್ತವೆ. ಓಂಕಾ ರವು ಸಮಸ್ತ ವರ್ಣಗಳ, ಭಾಷೆಯ ಎಲ್ಲ ಅಭಿವ್ಯಕ್ತಿಗಳ ಮೂಲ ರೂಪವಾಗಿದೆ. ಈ ರೀತಿಯಾಗಿ, ಎಲ್ಲ ಭಾಷಾ ಅಭಿವ್ಯಕ್ತಿಗಳೂ ಓಂಕಾರದಿಂದಲೇ ಹೊರಟಿವೆ ಎಂಬುದು ವೇದಾಂತದ ತಾತ್ತ್ವಿಕ ದೃಷ್ಟಿಕೋನ. ಧ್ವನಿರೂಪದ ವರ್ಣಗಳು ಅರ್ಥರೂಪದ ಭಾಷಾ ಭಿವ್ಯಕ್ತಿಗೆ ಶಾಬ್ದಿಕ ಸಂಕೇತಗಳು; ಮನುಷ್ಯ ಹಾಗೂ ಮಾತಿನಲ್ಲಿ ವ್ಯಕ್ತವಾಗುವ ಭಾಷಾರೂಪವು ಈ ಶಬ್ದ-ಅರ್ಥಗಳ ಸಮಾಗಮ ವಾಗಿದೆ. ಕಾಳಿದಾಸನ ಮಾತಿನಲ್ಲಿ ಈ ವಾಕ್-ಅರ್ಥಗಳು ಬೇರ್ಪಡಿಸಲಾಗದಂತೆ ಒಂದಾಗಿವೆ; ತಾತ್ತ್ವಿಕವಾಗಿ ಕೂಡ ಪದ ಮತ್ತು ಅರ್ಥಗಳು ಒಂದಾಗಿವೆ. ಈ ಅರ್ಥದಲ್ಲಿ ಅಕ್ಷರಗಳ ವಿಭಿನ್ನ ರೂಪಗಳೇ ಬರಹ ಮತ್ತು ಮುದ್ರಣಗಳು. ಇತ್ತೀಚೆಗೆ 'ಡಿಜಿಟಲ್' ಎಂದು ಕರೆಯಲಾಗುವ ಕಂಪ್ಯೂಟರ್ ಅಕ್ಷರಗಳೂ ಅದರದೇ ಇನ್ನೊಂದು ರೂಪ. ಇವೆಲ್ಲಕ್ಕೂ ಮೂಲದ್ರವ್ಯ ಮಾನ ವನ ಮನಸ್ಸಿನಲ್ಲಿದೆ; ವ್ಯಕ್ತಿ-ವ್ಯಕ್ತಿಗಳ ವ್ಯವಹಾರದಲ್ಲಿದೆ. '**ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ**'(ಜ್ಞಾನಕ್ಕೆ ಸಮಾನ ವಾದ ಪವಿತ್ರ ವಸ್ತು ಇನ್ನೊಂದಿಲ್ಲ') ಎಂಬ ಗೀತೆಯ ವಾಕ್ಯವನ್ನು ಅನುಸರಿಸಿ, ಜ್ಞಾನವಾಹಕವಾದ ಭಾಷೆ, ಭಾಷೆಯನ್ನು ಸಂವಹನ ಗೊಳಿಸುವ ಮಾತು, ಧ್ವನಿ ಎಲ್ಲವೂ ಜ್ಞಾನದ ಸ್ಪರ್ಶದಿಂದ ಪವಿತ್ರ ವಾಗುತ್ತವೆ ಎನ್ನಬಹುದು. ಇದೇ ರೀತಿ ಪುಸ್ತಕ, ಓದು, ಕಂಪ್ಯೂ ಟರ್, ಮೊಬೈಲ್-ಎಲ್ಲವೂ ಪವಿತ್ರವಾಗುತ್ತವೆ. ನಮ್ಮ ದೃಷ್ಟಿ ಹೀಗಿದ್ದರೆ, ಅಲ್ಲಿ ಒಳಿತು ಕಡುಕಿನ ಪ್ರಶ್ನೆಯೇ ಉದಯಿಸದು.

ಆದರೆ ಈಗ ಭಾರತ ಬದಲಾಗಿದೆ. ಸಾಂಪ್ರದಾಯಿಕ, ಸಾಂಸ್ಕೃತಿಕ ದೃಷ್ಟಿಗಳು ಅಲುಗಾಡುತ್ತಿವೆ. ಆಧುನಿಕತೆಯ ಮಹಾ ಪೂರದಲ್ಲಿ ಹಳೆಯ ನಂಬಿಕೆಗಳು ಕೊಚ್ಚಿಕೊಂಡು ಹೋಗುವ ಅಪಾಯ ಎದುರಾಗುತ್ತಿದೆ. ವಿದ್ಯಾಭ್ಯಾಸ, ಜ್ಞಾನ, ಓದುಬರಹ ಗಳ ಪವಿತ್ರ ಭಾವನೆ, ಶ್ರದ್ಧೆ-ಭಕ್ತಿ-ನಂಬಿಕೆಗಳನ್ನು ಮರುಸ್ಥಾಪನೆ ಮಾಡುವ ಅಗತ್ಯವಿದೆ.

### ಓದು-ಬರಹ: ಮುಂದೇನು?

ಆಧುನಿಕ ಡಿಜಿಟಲ್ ಜಗತ್ತಿನಲ್ಲಿ ಓದು, ಬರಹಗಳು ಇಲ್ಲ ದಾಗುವುದೆ? ಪುಸ್ತಕ ಪ್ರಪಂಚ ಇಲ್ಲದಾಗುವುದೇ? ಸಾವಿರಾರು ವರ್ಷಗಳ ಜ್ಞಾನಭಂಡಾರವೆಲ್ಲ ಎಲೆಕ್ಟ್ರಾನಿಕ್ ಮಾಧ್ಯಮದಲ್ಲೇ ಅಡಕವಾಗಿರುವುದೆ?- 'ಪೇಪರ್‌ಲೆಸ್ ಏಜ್' ('ಕಾಗದವಿಲ್ಲದೆ ವ್ಯವಹರಿಸುವ ಯುಗ') ಎಂಬ ಕಲ್ಪನೆ ಪ್ರಚಾರವಾಗುತ್ತಿರುವ ಈ ಕಾಲದಲ್ಲಿ ಮೇಲಿನ ಸಂದೇಹಗಳು ಮೂಡುತ್ತವೆ. ಆದರೆ ಸದ್ಯಕ್ಕಂತೂ ನಾವು ಆತಂಕಗೊಳ್ಳಬೇಕಾದ ಕಾರಣವೇನೂ ಇಲ್ಲ. ಜಗತ್ತು ಈಗ ಪೂರ್ತಿಯಾಗಿ ಪುಸ್ತಕಗಳ ಓದನ್ನು ನಿಲ್ಲಿಸಿಬಿಡುವ ಸ್ಥಿತಿಯಲ್ಲಿ ಇಲ್ಲ. ವಿದ್ಯಾಭ್ಯಾಸ, ಜ್ಞಾನಾರ್ಜನೆ, ಮನರಂಜನೆ ಗಳಿಗೆ ಮೂಲ ಆಕರ ಈಗಲೂ ಪುಸ್ತಕಗಳೇ ಆಗಿವೆ. ಮಾಹಿತಿ ತಂತ್ರಜ್ಞಾನದ ಸ್ಫೋಟದೊಂದಿಗೆ ಹಿಂದಿನದೆಲ್ಲವೂ ನಾಶವಾಗು ವುವು ಎಂಬ ಮಾತಿನಲ್ಲಿ ಹುರುಳಿಲ್ಲ. ಬದಲಾಗಿ, ಓದು-ಬರಹ ಗಳಿಲ್ಲದ ಹೊಸ ಪೀಳಿಗೆಯ ಜನರು ಕಳೆದುಕೊಳ್ಳುವ ಅಮೂಲ್ಯ ಅಂಶಗಳೇನು ಎಂಬುದನ್ನು ಸಮಾಜಕ್ಕೆ ಮನಗಾಣಿಸುವ ಪ್ರಯತ್ನ ನಡೆಯುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಶಾಲಾಕಾಲೇಜುಗಳಲ್ಲಿ ಸಕ್ರಿಯವಾಗಿ ಮಾಡಿಸಬೇಕು. ಪುಸ್ತಕಗಳನ್ನು ಕೊಂಡು ಓದುವ, ಸಂಗ್ರಹಿಸಿ ಮನೆಯನ್ನೇ ಗ್ರಂಥಾಲಯವಾಗಿಸುವ ಹವ್ಯಾಸ ಇನ್ನೂ ಉತ್ತಮ. ಆದರೆ ಒಂದು ಮಾತು ನಿಜ: ವೈಯಕ್ತಿಕವಾಗಿ ನಾವು, ನೀವು ಪ್ರತಿದಿನವೂ ಒಂದು ಗಂಟೆ – ಎರಡು ಗಂಟೆ ನಿಯಮಿತವಾಗಿ ಓದುವ ಅಭ್ಯಾಸವನ್ನಿರಿಸಿಕೊಂಡರೆ, ಅದೇ ನಿಜವಾದ ಪುನರುಜ್ಜೀವನವಾಗುತ್ತದೆ. ❋

**ಆಗಸ್ಟ್ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೨ | ಶುಕ್ರವಾರ | ಸ್ವಾಮಿ ರಾಮಕೃಷ್ಣಾನಂದ ಜಯಂತಿ |
| ೧೫ | ಗುರುವಾರ | ಏಕಾದಶಿ |
| ೧೯ | ಸೋಮವಾರ | ಸ್ವಾಮಿ ನಿರಂಜನಾನಂದ ಜಯಂತಿ |
| ೨೬ | ಸೋಮವಾರ | ಶ್ರೀಕೃಷ್ಣ ಜನ್ಮಾಷ್ಟಮಿ |
| ೨೯ | ಬುಧವಾರ | ಏಕಾದಶಿ |

# ಸಾಕ್ಷಾತ್ಕಾರಕ್ಕೆ ದಾರಿ



❈ **ಭಗವಂತನ** ಸಾಕ್ಷಾತ್ಕಾರಕ್ಕೆ ಅನಂತ ಮಾರ್ಗ. ಅವುಗಳಲ್ಲಿ ಜ್ಞಾನ, ಭಕ್ತಿ, ಕರ್ಮ ಮಾರ್ಗಗಳಿವೆ. ಯಾವ ಮಾರ್ಗವನ್ನಾದರೂ ಅನುಸರಿಸು. ನಿಜವಾದ ಆಕಾಂಕ್ಷೆ ಇದ್ದರೆ, ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ.

❈ **ಇರುವೆಯ** ಹಾಗೆ ಸಂಸಾರದಲ್ಲಿ ವಾಸಿಸು. ಈ ಜಗತ್ತಿನಲ್ಲಿ ನಿತ್ಯ, ಅನಿತ್ಯ ಎರಡೂ ಬೆರೆತುಕೊಂಡಿವೆ, ಮರಳು-ಸಕ್ಕರೆಯ ಹಾಗೆ. ಇರುವೆಯಾಗಿ ಕೇವಲ ಸಕ್ಕರೆಯನ್ನೇ ಆರಿಸಿಕೊ.



ಚಿದಾನಂದರಸ, ವಿಷಯರಸ ಬೆರೆತುಕೊಂಡಿವೆ - ನೀರು, ಹಾಲಿನ ಹಾಗೆ. ಹಂಸಪಕ್ಷಿಯಾಗಿ ಹಾಲನ್ನು ಕುಡಿದು ನೀರನ್ನು ತ್ಯಜಿಸಿಬಿಡು.

ಈ ಜಗತ್ತಿನಲ್ಲಿ ಬಾತುಕೋಳಿಯ ಹಾಗೆ ಇರು. ಅದರ ರೆಕ್ಕೆ-ಪುಕ್ಕಗಳಲ್ಲಿ ನೀರು ಸೇರಿಕೊಳ್ಳುತ್ತದೆ. ಆದರೆ ಅದು ಅದನ್ನು ಒದರಿಬಿಡುತ್ತದೆ. ಈ ಸಂಸಾರದಲ್ಲಿ ಕೆಸರು ಮೀನಿನ ಹಾಗೆ ವಾಸಿಸು. ಅದು ಕೆಸರಿನೊಳಗೇ ಇದ್ದರೂ, ಅದರ ಮೈ ಮಾತ್ರ ಪರಿಷ್ಕಾರ ಪರಿಚ್ಛಿನ್ನ.

ಈ ಜಗತ್ತು ಸತ್ಯದ ಮತ್ತು ತೋರಿಕೆಯ ಒಂದು ಮಿಶ್ರಣ. ತೋರಿಕೆಯನ್ನು ತ್ಯಜಿಸಿ ಸತ್ಯವನ್ನು ಸ್ವೀಕರಿಸು.

❈ **ಸಂಸಾರ**ದಲ್ಲಿದ್ದರೂ ಯಾರು ಭಗವಂತನನ್ನು ಪ್ರಾರ್ಥಿಸುತ್ತಾನೋ ಆತ ವೀರಭಕ್ತ. ಭಗವಂತ ಭಾವಿಸುತ್ತಾನೆ: 'ಯಾರು ಸಂಸಾರವನ್ನು ತ್ಯಜಿಸಿದ್ದಾನೋ ಆತ ನನ್ನನ್ನು ಪ್ರಾರ್ಥಿಸಿಯೇ ಪ್ರಾರ್ಥಿಸುತ್ತಾನೆ. ನನ್ನ ಸೇವೆಯನ್ನು ಆತ ಮಾಡಲೇಬೇಕು. ಇದರಲ್ಲಿ ವಿಶೇಷತೆಯೇನಿದೆ? ಒಂದು ಪಕ್ಷ ಆತ ನನ್ನನ್ನು ಪ್ರಾರ್ಥಿಸದಿದ್ದರೆ ಎಲ್ಲರೂ ಆತನಿಗೆ ಛೀಮಾರಿ ಹಾಕಿಬಿಡುತ್ತಾರೆ. ಆದರೆ ಯಾರು ಸಂಸಾರದಲ್ಲಿದ್ದೂ ನನ್ನನ್ನು ಪ್ರಾರ್ಥಿಸುತ್ತಾನೊ, ಸಂಸಾರವೆಂಬ ಇಪ್ಪತ್ತು ಮಣದ ಕಲ್ಲನ್ನು ಒಂದು ಕಡೆಗೆ ತಳ್ಳಿ ನನ್ನ ದರ್ಶನ ಪಡೆಯಲು ಪ್ರಯತ್ನಿಸುತ್ತಾನೊ, ಆತನೇ ಧನ್ಯ, ಆತನೇ ಮಹಾತ್ಮ, ಆತನೇ ವೀರಪುರುಷ.

❈ **ಆತನ** ಸಾಕ್ಷಾತ್ಕಾರಕ್ಕಾಗಿ ವ್ಯಾಕುಲಪಡಬೇಕು. ನೀನು ಯಾವ ಮಾರ್ಗವನ್ನಾದರೂ ಅನುಸರಿಸು; ಸಾಕಾರದಲ್ಲಾದರೂ ಶ್ರದ್ಧೆಯಿಡು, ನಿರಾಕಾರದಲ್ಲಾದರೂ ಶ್ರದ್ಧೆಯಿಡು; ಭಗವಂತ ಮನುಷ್ಯ ರೂಪಿನಲ್ಲಿ ಅವತರಿಸುತ್ತಾನೆ ಎಂಬುದರಲ್ಲಿ ನಿನಗೆ ಶ್ರದ್ಧೆ ಇರಲಿ, ಬಿಡಲಿ; ಆತನಲ್ಲಿ ಅನುರಾಗವಿದ್ದರೇ ಬೇಕಾದಷ್ಟು. ಆಗ ಆತ ತನ್ನ ನಿಜಸ್ವರೂಪ ಏನು ಎಂಬುದನ್ನು ತಾನಾಗಿಯೇ ತೋರಿಸಿಕೊಟ್ಟುಬಿಡುತ್ತಾನೆ. ಹುಚ್ಚನಾಗಬೇಕಾದರೆ, ಪ್ರಾಪಂಚಿಕ ವಸ್ತುಗಳಿಗಾಗಿ ಏಕೆ ಹುಚ್ಚನಾಗಬೇಕು? ಹುಚ್ಚನಾಗಬೇಕಾದರೆ, ಭಗವಂತನಿಗಾಗಿ ಹುಚ್ಚನಾಗು.

❈ **ಆಹಾ!** ಆ ಪ್ರೇಮದ ಒಂದು ಬಿಂದು ಯಾರಿಗಾದರೂ ಉಂಟಾಗುವುದಾದರೆ! ಅದು ಎಂಥ ಅನುರಾಗ! ಏನು ಪ್ರೀತಿ ಅದು! ರಾಧೆಯದು ಕೇವಲ ನೂರಕ್ಕೆ ನೂರು ಭಾಗವಲ್ಲ, ನೂರಕ್ಕೆ ನೂರಿಪ್ಪತ್ತೈದು ಭಾಗ ಅನುರಾಗ! ಇದಕ್ಕೆ ಪ್ರೇಮೋನ್ಮಾದ ಅಂತ ಹೆಸರು.



ಮುಖ್ಯವಾಗಿ ಮಾಡಬೇಕಾದ್ದೇನೆಂದರೆ, ಭಗವಂತನನ್ನು ಪ್ರೀತಿಸಬೇಕು.

*'ಶ್ರೀರಾಮಕೃಷ್ಣ ವಚನವೇದ'ದಿಂದ*

# ಐದು ಹೂಗಳ ಅಲಂಕಾರ

ಸಂಕಲನ (ಬಂಗಾಳಿ) : **ಬ್ರಹ್ಮಚಾರಿ ಅಕ್ಷಯಚೈತನ್ಯ**
ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಶ್ರೀರಾಮಕೃಷ್ಣರು ತಮ್ಮ ಹಿರಿಯ, ಕಿರಿಯ ಭಕ್ತರುಗಳ ಬಗ್ಗೆ ಹೇಳುತ್ತ, ''ಅವರು ನನಗೆ ಐದು ಹೂಗಳ ಅಲಂಕಾರದಂತೆ'' ಎನ್ನುತ್ತಿದ್ದರು. ಎಲ್ಲರನ್ನೂ ಜೊತೆಗೆ ಸೇರಿಸಿಕೊಂಡು ಅವರ ''ಪ್ರೇಮದ ಪಟ್ಟಣದಲ್ಲಿ ಆನಂದದ ಸಂತೆ'' ನಡೆಯುತ್ತಿತ್ತು. ಅನೇಕ ವರ್ಷಗಳಿಗೆ ಮೊದಲು ನಾನು ಶ್ರೀಮಾತೆಯವರ ಜೀವನ ಚರಿತ್ರೆಯನ್ನು ಬರೆದಾಗ, ಅವರ ಅನೇಕ ಮಂದಿ ಭಕ್ತರು ತಮ್ಮ ಅನೇಕ ಸ್ಮೃತಿಕಥೆಗಳನ್ನು ನನ್ನ ಬಳಿ ಕೊಟ್ಟದ್ದರು. ಶ್ರೀಮಾತೆಯವರ ಜೀವನಚರಿತ್ರೆ ಪ್ರಕಟವಾದ ಮೇಲೆ ನಾನು ಗಮನಿಸಿದೆ, ಶ್ರೀಮಾತೆಯವರ ಬಗ್ಗೆ ಸಂಗ್ರಹಿಸಲಾದ ಅನೇಕ ವಿಷಯಗಳು ಇನ್ನೂ ನನ್ನ ಬಳಿ ಉಳಿದಿವೆ – ಶ್ರೀಮಾತೆಯವರೇ ಹೇಳಿದ ಅಥವಾ ವಿವಿಧ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಕೇಳಿದ ಹಲವು ಸಂಗತಿಗಳು – ಅವೆಲ್ಲ ಜೀವನ ಚರಿತ್ರೆಯಲ್ಲಿ ಸೇರಿರಲಿಲ್ಲ. ಕೆಲವು ವರ್ಷಗಳ ಮುನ್ನ ನಾನು 'ಐದು ಹೂಗಳ ಅಲಂಕಾರ' ಎಂಬ ಶೀರ್ಷಿಕೆಯಲ್ಲಿ ಒಂದು ಸಣ್ಣ ಪುಸ್ತಿಕೆಯನ್ನು ಪ್ರಕಟಿಸಿದ್ದೆ; ಅದರಲ್ಲಿ ಮೇಲೆ ಹೇಳಿದ ವಿಷಯಗಳು ಅಡಕವಾಗಿದ್ದವು. ನನ್ನ ಕೋರಿಕೆಯಂತೆ ಪ್ರೀತಪಾತ್ರರಾದ ಸ್ವಾಮಿ ಪೂರ್ಣಾತ್ಮಾನಂದರು ಈ ಪುಸ್ತಿಕೆಯಿಂದ ಆಯ್ದ ಭಾಗಗಳನ್ನು ಇಲ್ಲಿ ಸಂಗ್ರಹಿಸಿ ನೀಡಿದ್ದಾರೆ. ನಾನು ಬರೆದ ಮೂಲ ಜೀವನ ಚರಿತ್ರೆ ಗ್ರಂಥಕ್ಕೆ ಪೂರಕವೆಂಬಂತೆ ಈ ಸಂಕಲನವನ್ನು ಪರಿಗಣಿಸಬೇಕು. ಈ ಸಂಕಲನವು ಭಕ್ತಜನರಿಗೆ ಹೃದ್ಗತವಾಗುವುದು ಎಂದು ನನ್ನ ನಂಬಿಕೆ.

— *ಬ್ರಹ್ಮಚಾರಿ ಅಕ್ಷಯಚೈತನ್ಯ*

### ೧. ಸ್ವಾಮಿ ಕೇಶವಾನಂದ



೧೯೦೬ನೇ ಇಸವಿಯ ಮಳೆಗಾಲದಲ್ಲಿ ಸ್ವಾಮಿ ನಿರ್ಮಲಾನಂದರು ಹಾಗೂ ಬ್ರಹ್ಮಚಾರಿ ಕೃಷ್ಣಲಾಲ್ ಇಲ್ಲಿಗೆ ಬಂದರು. ಕೋಯಲ್‌ಪಾರಾದ—ದಾಸ್ ಅವರ ಮನೆಗೆ ಅವರು ಪದಾರ್ಪಣೆ ಮಾಡಿದರು. ಅವರು ಹೇಳಿದರು: ''ಜಯರಾಮಬಾಟಿಯಲ್ಲಿ ಶ್ರೀಮಾತೆಯವರಿದ್ದಾರೆ. ಅಲ್ಲಿಗೆ ಹೋಗೋಣ.'' ಬೆಳಿಗ್ಗೆ ಸ್ನಾನ ಮಾಡಿ, ಕೃಷ್ಣ ಎಂಬ ಭಕ್ತನೊಬ್ಬನನ್ನೂ ಜೊತೆಗೆ ಕರೆದುಕೊಂಡು ಜಯರಾಮಬಾಟಿಗೆ ಹೊರಟೆವು. ಶ್ರೀಮಾತೆಯವರು ತಮ್ಮ ದಕ್ಷಿಣ ದಿಕ್ಕಿನತ್ತ ಬಾಗಿಲಿದ್ದ ಮನೆಯ ಒಳಗಿನಿಂದ, ಬಾಗಿಲಿಗೆ ಎಡಗೈಯನ್ನು ಇಟ್ಟು ನಿಂತಿದ್ದರು. ನಮ್ಮತ್ತ ನೋಡುತ್ತಲೇ ಅವರು, ''ದೀನೂ-ದಾದಾ!'' ಎಂದರು. ಕಾಳೀಮಾವ ಹೇಳಿದರು, ''ಇಲ್ಲ, ಇದು ಅವರ ಮಗ'' ಎಂದು. ಅದಕ್ಕೆ ಶ್ರೀಮಾತೆಯವರು, ''ಅಬ್ಬಾ! ದೀನೂ-ದಾದಾ ಅವರ ಮಗ ಇಷ್ಟೊಂದು ದೊಡ್ಡವನಾಗಿಬಿಟ್ಟಿದ್ದಾನೆ! ನಾನು ಆತನನ್ನು ಈ ರೀತಿಯೇ ಕಂಡಿದ್ದೆ'' ಎಂದರು. ಅನಂತರ ಮಾತನಾಡುತ್ತ ಅವರೆಂದರು, ''ನಿನ್ನ ತಂದೆಯವರು ಈ ಕಡೆಗೆ ಹತ್ತು-ಹನ್ನೆರಡು ವರ್ಷ ಪಾಠಶಾಲೆ ನಡೆಸಿದ್ದರು. ಕಾಳಿ, ವರದ, ಅಭಯ ಎಲ್ಲರಿಗೂ ಅವರು ಕಲಿಸಿದ್ದರು. ಇಲ್ಲಿಗೂ ಬರುತ್ತಿದ್ದರು, ಇಲ್ಲೇ ತಂಗುತ್ತಿದ್ದರು. ಠಾಕೂರರು ಬಂದಾಗ ಅವರನ್ನು ಎಲ್ಲರೂ ಹುಚ್ಚರೆಂದೇ ಕರೆಯುತ್ತಿದ್ದರೂ, ನಿನ್ನ ತಂದೆಯ ಮೇಲೆ ಭಕ್ತಿಯನ್ನಿಟ್ಟಿದ್ದರು. ಅವರ ಸಣ್ಣ ಪುಟ್ಟ ಕೆಲಸಗಳನ್ನು ಮಾಡಿಕೊಡುತ್ತಿದ್ದರು. ನಿನ್ನಷ್ಟು ವಯಸ್ಸಾಗುವವರೆಗೂ ಇಲ್ಲಿದ್ದರು. ನೀನೂ ನೋಡುವುದಕ್ಕೆ ಅವರ ಹಾಗೇ ಇದ್ದೀಯಾ ಅಂತ, ನಿನ್ನನ್ನು ಕಂಡು ಅವರ ನೆನಪಾಯಿತು. ನಿನ್ನ ತಂದೆಯನ್ನು 'ದಾದಾ' (ಅಣ್ಣ) ಎಂದು ಕರೆಯುತ್ತಿದ್ದೆ. ನಾನು ನಿನಗೆ ಚಿಕ್ಕಮ್ಮನಾಗುತ್ತೇನೆ.'' ''ಇಲ್ಲಮ್ಮಾ, ನಾನು ನಿಮ್ಮನ್ನು 'ಚಿಕ್ಕಮ್ಮ' ಎಂದೆಲ್ಲ ನೀರಸವಾದ ಹೆಸರಿನಿಂದ ಕರೆಯಲು ಇಷ್ಟಪಡಲಾರೆ. ನಿಮ್ಮನ್ನು 'ಅಮ್ಮಾ' ಎಂದೇ ಕರೆಯುತ್ತೇನೆ.'' ಅದಕ್ಕೆ ಶ್ರೀಮಾತೆಯವರು, ''ಹಾಗೇ ಆಗಲಿ. ನಿನ್ನ ತಂದೆ ಠಾಕೂರರ ಸೇವೆ ಮಾಡಿದ್ದರು ಎಂಬ ಕಾರಣದಿಂದಲೇ, ಆ ಪುಣ್ಯದ ಬಲದಿಂದ ನಿನಗೆ ಧಾರ್ಮಿಕ ಬುದ್ಧಿ ಬಂದಿದೆ. ನನ್ನ ಬಳಿ ಠಾಕೂರರ ಭಾವಚಿತ್ರವಿದೆ, ಅದನ್ನು ನಿನಗೆ ಕೊಡುತ್ತೇನೆ.'' ಒಂದು ದೊಡ್ಡ ಪೆಟ್ಟಿಗೆಯೊಳಗೆ ತೆಳ್ಳಗಿನ ಕಾಗದದಿಂದ ಸುತ್ತಿ ಇಟ್ಟಿದ್ದ, ವಸ್ತ್ರದಿಂದ ಕಟ್ಟು ಹಾಕಿಸಿದ್ದ, ಹಾಗೂ ಜೋಪಾನವಾಗಿರಿಸಿದ್ದ ಠಾಕೂರರ ಒಂದು ಫೋಟೋವನ್ನು ಶ್ರೀಮಾತೆ ಹೊರಗೆ ತೆಗೆದರು. ಫೋಟೋವನ್ನು ನನ್ನ ಕೈಗೆ ಕೊಟ್ಟು ಅವರು ಹೇಳಿದರು: ''ಇದಕ್ಕೆ ಕಟ್ಟು ಹಾಕಿಸಿ, ನಿತ್ಯ ಪೂಜೆ ಮಾಡು... ನನ್ನ ಹತ್ತಿರ ನರೇನ್‌ನ (ಸ್ವಾಮಿ ವಿವೇಕಾನಂದರ) ಒಂದು ಚಿತ್ರ ಇದೆ,